# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1146 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 23/12/2021 |
| ಉತ್ತರಿಸುವವರು | ಕಾರ್ಮಿಕ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೃಷಿ ಕಾರ್ಮಿಕರು ಹಾಗೂ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಯದಲ್ಲಿ ತೊಡಗಿರುವರ ನಂತರ ಅಸಂಘಟಿತ ವಲಯಕ್ಕೆ ಸೇರಿದಂತೆ ಮನೆ ಕೆಲಸ ಮಾಡುವವರು, ಅಡುಗೆಯವರು, ವಾಹನ ಚಾಲಕರು, ದೋಬಿಗಳು, ಮನೆ ಪಾಠ ಹೇಳುವರು ಮತ್ತು ಕಾವಲುಗಾರರು ಅತಿ ಹೆಚ್ಚಿನ ಸಂಖ್ಯೆ ಇರುವುದು ನಿಜವೇ; ಈ ಅಸಂಘಟಿತ ವಲಯಕ್ಕೆ ಸೇರಿದ ಗೃಹ ಚಾಕರಿದಾರರ ಸಮೀಕ್ಷೆಯನ್ನು ರಾಜ್ಯ ಸರ್ಕಾರ ಕೈಗೊಂಡಿದೆಯೇ; ಹಾಗಿದ್ದಲ್ಲಿ, ಈ ಸಮೀಕ್ಷೆಯ ಸಂಪೂರ್ಣ ಮಾಹಿತಿ ನೀಡುವುದು ಒಂದು ವೇಳೆ ಇಲ್ಲದಿದ್ದಲ್ಲಿ, ಈ ಸಮೀಕ್ಷೆಯನ್ನು ಯಾವಾಗ ಕೈಗೊಳ್ಳಲಾಗುವುದು; | ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು 43 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಗುರುತಿಸಿದ್ದು, ಅದರಲ್ಲಿ "ಕೃಷಿ ಕಾರ್ಮಿಕರು, ಮನೆ ಕೆಲಸ ಮಾಡುವವರು, ಅಡುಗೆಯವರು, ದೋಬಿಗಳು, ವಾಹನ ಚಾಲಕರು ಸಹ ಸೇರಿದ್ದು, ಮನೆಪಾಠ ಹೇಳುವವರು ಮತ್ತು ಕಾವಲುಗಾರರು ಸದರಿ ಪಟ್ಟಿಯಲ್ಲಿ ಇರುವುದಿಲ್ಲ. ಆದರೆ, ಸದರಿ ಕಾರ್ಮಿಕರನ್ನು, ಕ್ರ.ಸಂ 43– ಇತರೆ ವರ್ಗ (ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಕಲಂ 2(m) ಹಾಗೂ ಕಲಂ 2(1)ರ ವ್ಯಾಖ್ಯಾನಕ್ಕೆ ಒಳಪಡುವ ಅಸಂಘಟಿತ ವರ್ಗದ ಎಲ್ಲಾ ಕಾರ್ಮಿಕರು)ದಲ್ಲಿ ಅಸಂಘಟಿತ ಕಾರ್ಮಿಕರೆಂದು ಪರಿಗಣಿಸಬಹುದಾಗಿದೆ.<br>ಆದರೆ, ಮಂಡಳಿಯು ಜಾರಿಗೊಳಿಸುತ್ತಿರುವ "ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ"ಯಡಿ ಗೃಹ ಕಾರ್ಮಿಕರು ಹಾಗೂ ಇತರೆ 10 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್‌ಕಾರ್ಡ್ ನೀಡಲಾಗುತ್ತಿದ್ದು ಇದುವರೆಗೆ 55,761 ಗೃಹ ಕಾರ್ಮಿಕರು ಸದರಿ ಯೋಜನೆಯಡಿ ನೋಂದಾಯಿತರಾಗಿದ್ದಾರೆ.<br>ಗೃಹ ಚಾಕರಿದಾರರಿಗೆ ಸಂಬಂಧಿಸಿದಂತೆ, ಕೋವಿಡ್–19ರ 2ನೇ ಅಲೆಯ ವಿಶೇಷ ಪ್ಯಾಕೇಜ್ ಅಡಿ ಸರ್ಕಾರದಿಂದ ಘೋಷಿತ ತಲಾ ರೂ.2,000/–ಗಳ ಒಂದು ಬಾರಿಯ ನೆರವನ್ನು ಕೋರಿ 4,90,111 ಗೃಹ ಕಾರ್ಮಿಕರು ಸೇವಾ ಸಿಂಧು ಪೋರ್ಟಲ್ ಅಡಿ ನೋಂದಾಯಿಸಿ ಅರ್ಜಿ ಸಲ್ಲಿಸಿರುತ್ತಾರೆ.<br>ಅಸಂಘಟಿತ ಗೃಹ ಕಾರ್ಮಿಕರಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರದಿಂದ ಯಾವುದೇ ಸಮೀಕ್ಷೆ ನಡೆದಿರುವುದಿಲ್ಲ. ಆದ್ದರಿಂದ, ಸದರಿ ವರ್ಗಗಳ ಕಾರ್ಮಿಕರ ನಿಖರ ಸಂಖ್ಯೆ ಲಭ್ಯವಿರುವುದಿಲ್ಲ. |

| | | |
|---|---|---|
| ಆ) | ಈ ಅಸಂಘಟಿತ ವಲಯದಲ್ಲಿ ಗೃಹ ಚಾಕರಿದಾರರನ್ನು ಕಾರ್ಮಿಕರೆಂದು ಗುರುತಿಸಲು ಪ್ರಸ್ತುತದಲ್ಲಿರುವ ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿ ಮಾಡಲು ಅಥವಾ ಹೊಸ ಕಾಯಿದೆ ಒಂದನ್ನು ತಂದು ಇವರನ್ನು ಕಾನೂನಿನ ಚೌಕಟ್ಟಿನ ಒಳಗಡೆ ತರಲು ಸರ್ಕಾರ ಆಲೋಚಿಸಿದೆಯೇ; ಹಾಗಿದ್ದಲ್ಲಿ, ಈ ಪ್ರಸ್ತಾವನೆ ಬಗ್ಗೆ ವಿವರ ನೀಡುವುದು; | ಕರ್ನಾಟಕ ರಾಜ್ಯ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಕಲಂ 2(m) ಹಾಗೂ ಕಲಂ 2(l) ರ ವ್ಯಾಖ್ಯಾನದಡಿ ಒಳಪಡುವ ಅಸಂಘಟಿತ ವರ್ಗದ ಎಲ್ಲಾ ಕಾರ್ಮಿಕರು ಸೇರಿದಂತೆ ಒಟ್ಟು 43 ಕಾರ್ಮಿಕರ ವರ್ಗಗಳನ್ನು ಗುರುತಿಸಿದ್ದು, ಕ್ರ.ಸಂ (7)ರನ್ವಯ ಗೃಹ ಕಾರ್ಮಿಕರು ಪಟ್ಟಿಯಲ್ಲಿ ಸೇರಿರುತ್ತಾರೆ.<br><br>ಗೃಹ ಕಾರ್ಮಿಕರಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸರ್ಕಾರವು ಕನಿಷ್ಠ ವೇತನ ಕಾಯ್ದೆ, 1948ರಡಿ ಅಧಿಸೂಚನೆ ಸೇರಿಸಿ ಕನಿಷ್ಠ ವೇತನ ದರಗಳನ್ನು ನಿಗದಿಪಡಿಸಿದ್ದು, ಕಾಲಕಾಲಕ್ಕೆ ಪರಿಷ್ಕರಣೆಗೊಳಿಸಲಾಗುತ್ತಿದೆ.<br><br>ಆದ್ದರಿಂದ, ಗೃಹ ಕಾರ್ಮಿಕರು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಯ ವ್ಯಾಪ್ತಿಗೆ ಬರುವುದರಿಂದ ಹೊಸ ಕಾಯಿದೆ ರೂಪಿಸುವ ಅಥವಾ ಪ್ರಸ್ತುತ ಕಾಯ್ದೆಗೆ ಯಾವುದೇ ತಿದ್ದುಪಡಿ ಮಾಡುವ ಅವಶ್ಯಕತೆಯಿರುವುದಿಲ್ಲ. |
| ಇ) | ರಾಜ್ಯದಲ್ಲಿನ ಅಸಂಘಟಿತ ವಲಯದಲ್ಲಿನ ಬಹುತೇಕ ಈ ಗೃಹ ಚಾಕರಿದಾರರು ಆಸರೆ ಇಲ್ಲದೆ ವಲಸಿಗರು ಮತ್ತು ಅಲೆಮಾರಿಗಳಾಗಿದ್ದು, ಉದ್ಯೋಗ ಅರಸಿ ಪಟ್ಟಣ ಮತ್ತು ನಗರ ಪ್ರದೇಶಗಳಿಗೆ ವಲಸೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಅಸಂಘಟಿತ ಗೃಹ ಚಾಕರಿದಾರರಿಗೆ ಸಾಮಾಜಿಕ ಭದ್ರತೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಮಂಡಳಿಯು ಜಾರಿಗೊಳಿಸುತ್ತಿರುವ "ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ"ಯಡಿ ಗೃಹ ಕಾರ್ಮಿಕರು ಹಾಗೂ ಇತರೆ 10 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್‌ಕಾರ್ಡ್ ನೀಡಲಾಗುತ್ತಿದೆ, ಹಾಗೂ ಕೋವಿಡ್-19ರ 2ನೇ ಅಲೆಯ ಲಾಕ್‌ಡೌನ್ ಕಾರಣ ಅಸಂಘಟಿತ ಕಾರ್ಮಿಕರು ಸಂಕಷ್ಟಕ್ಕೊಳಗಾಗಿರುವುದನ್ನು ಗಮನಿಸಿ ರಾಜ್ಯ ಸರ್ಕಾರವು, ಗೃಹ ಕಾರ್ಮಿಕರು ಹಾಗೂ ಇತರೆ 10 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ತಲಾ ರೂ.2,000/-ಗಳ ಒಂದು ಬಾರಿಯ ಪರಿಹಾರವನ್ನು ಘೋಷಿಸಿದ್ದು, ಸರ್ಕಾರದ ಮಾರ್ಗಸೂಚಿಗಳನ್ವಯ ಎಲ್ಲಾ ಅರ್ಹ ಕಾರ್ಮಿಕರಿಗೆ ನೆರವಿನ ಮೊತ್ತವನ್ನು ಈ ಮಂಡಳಿಯ ಮೂಲಕ ವಿತರಿಸಲಾಗುತ್ತಿದೆ. |
| ಈ) | ರಾಜ್ಯದಲ್ಲಿ ಕೊರೋನಾ ಸೋಂಕು ಹರಡುವಿಕೆ ಸಮಯದಲ್ಲಿ ವಿಧಿಸಲಾದ ಲಾಕ್‌ಡೌನ್‌ನಿಂದ ಗೃಹ ಚಾಕರಿದಾರರು ಬಹಳ ಬಳಲಿದ್ದು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಂತೆ ಅಸಂಘಟಿತ ಗೃಹ ಚಾಕರಿದಾರರ ಸಾಮಾಜಿಕ ಭದ್ರತಾ ಮಂಡಳಿಯನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಮುಂದಾಗುವುದೇ? (ಹಾಗಿದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು) | ಪ್ರಸ್ತುತ ಯಾವುದೇ ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

**ಕಾಇ 560 ಎಲ್‌ಇಟಿ 2021**

(ಅರಬೈಲ್ ಶಿವರಾಮ ಹೆಬ್ಬಾರ್)
**ಕಾರ್ಮಿಕ ಸಚಿವರು**